ಎನ್ನುತ್ತಿದ್ದಳು. ಈ ಭೇಟಿಗಳು ಸಾಮಾನ್ಯವಾದಂತೆ, ವಾಸು ಹೆಚ್ಚುಕಡಿಮೆ ಪ್ರತಿ ಸಂಜೆಯೂ ಮನೆಗೆ ಬಂದುಹೋಗತೊಡಗಿದಂತೆ ರೇವತಿ ಅವನು ಬಂದನೆಂದು ಘೋಷಿಸುವುದಕ್ಕಾಗಿ ಬಾಗಿಲಲ್ಲೇ ಕಾದಿರುತ್ತಿದ್ದಳು. ದೂರದಲ್ಲಿ ಅವನನ್ನು ಕಂಡ ತಕ್ಷಣ ತನ್ನ ತಂದೆಗೆ 'ವಾಸು ಅಣ್ಣ ಬಂದಾ' ಎಂದು ಕೂಗಿ ಹೇಳುತ್ತಿದ್ದಳು. ಆಮೇಲೆ ಅವನ ಪಕ್ಕದಲ್ಲಿ ಕುಳಿತುಕೊಂಡು ತನಗೆ ಗೊತ್ತಿದ್ದ ಎಲ್ಲ ದೇವರನಾಮಗಳನ್ನೂ ಹಾಡುತ್ತಿದ್ದಳು. ವಾಸುವಿನ ಕಿವಿಗೆ ಆ ಹಾಡುಗಳು ಯಾವಾಗಲೂ ಹೊಸದಾಗಿಯೇ ಕೇಳಿಸುತ್ತಿದ್ದವು.

ಒಂದು ದಿನ ಅದೂ ಇದೂ ಮಾತಾಡುತ್ತಿದ್ದಾಗ ವಾಸುವಿನ ಮೂಲಕ ಶ್ಯಾಮಬಂಧುವಿಗೆ ಕಟಕ್‌ನಲ್ಲಿ ಒಂದು ಶಾಲೆಯಿದೆಯೆಂದೂ ಅಲ್ಲಿ ಹೆಣ್ಣುಮಕ್ಕಳು ಅಭ್ಯಾಸಮಾಡಬಹುದೆಂದೂ ಜೊತೆಗೆ ಕುಶಲ ಕಲೆಯನ್ನೂ ಕಲಿಯಬಹುದೆಂದೂ ತಿಳಿಯಿತು. ತಕ್ಷಣ ಅವರಲ್ಲಿ ರೇವತಿಗೆ ಶಿಕ್ಷಣ ಕೊಡಿಸಬೇಕೆಂಬ ಆಸೆ ಮೊಳೆಯಿತು. ಈ ವಿಷಯವನ್ನು ಅವರು ವಾಸುವಿಗೆ ತಿಳಿಸಿದಾಗ, ಆಗಲೇ ಶ್ಯಾಮಬಂಧು ಅವರನ್ನು ತಂದೆಯ ಸ್ಥಾನದಲ್ಲಿರಿಸಿದ್ದ ಅವನು, 'ನಾನೇ ನಿಮಗೆ ಆ ಬಗ್ಗೆ ಹೇಳಬೇಕೆಂದಿದ್ದೆ' ಎಂದ.

ಆ ಮಾತುಗಳನ್ನು ಕೇಳಿಸಿಕೊಂಡ ರೇವತಿ ಒಳಗೆ ಓಡಿದಳು. ತನ್ನ ತಾಯಿ ಅಜ್ಜಿಗೆ, 'ನಾನು ಓದೋಕೆ ಹೋಗ್ತೇನೆ, ಓದೋಕೆ' ಎಂದು ಹೇಳಿದಳು.

ಅವಳ ತಾಯಿ ನಗುತ್ತಾ, 'ಆಯಿತು, ಓದು' ಎಂದರೆ ಅವಳ ಅಜ್ಜಿಯ ಪ್ರತಿಕ್ರಿಯೆ ತುಂಬ ಹರಿತವಾಗಿತ್ತು:

'ಅದರಿಂದ ಏನು ಪ್ರಯೋಜನ? ಪುಸ್ತಕ ಓದೋದರಿಂದ ಹುಡುಗಿಗೇನಾದ್ರೂ ಸಹಾಯ ಆಗುತ್ತಾ? ಹುರಿದು ಬೇಯಿಸಿ ಅಡುಗೆ ಮಾಡೋದು, ಮೊಸರು ಕಡೆಯೋದು, ಗೋಡೆಯ ಮೇಲೆ ರಂಗೋಲಿ ಬರೆಯೋದು, ಇಷ್ಟು ಬಂದರೆ ಸಾಲದಾ?'

ಆವತ್ತು ರಾತ್ರಿ ಶ್ಯಾಮಬಂಧು ರೇವತಿಯನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ತಗ್ಗುಮಣೆಯ ಮೇಲೆ ಊಟಕ್ಕೆ ಕುಳಿತಾಗ ಅವರೆದುರಿಗೇ ಕುಳಿತ ಮುದುಕಿ ತಾನೀಗ ಮಾತನಾಡಿಬಿಡಬೇಕೆಂದು ಚಡಪಡಿಸಿದಳು. 'ಇನ್ನೂ ಸ್ವಲ್ಪ ಅನ್ನ ಬಡಿಸು, ಬೇಳೆ ತೊವ್ವೆ ಹಾಕು ಇನ್ನೊಂದು ಸರ್ತಿ. ಚಿಟಿಕೆ ಉಪ್ಪೂ ಹಾಕು' ಎಂದು ಸೊಸೆಗೆ ಹೇಳುತ್ತಾ ವಿಷಯಕ್ಕೆ ಬಂದಳು: 'ಶ್ಯಾಮಾ, ರೇವಿ ಕಲೀತಾಳಾ? ಯಾಕೆ ಕಲೀಬೇಕು ಮಗಾ? ಕಲಿಯೋದರಿಂದ ಹುಡುಗೀಗೇನು ಪ್ರಯೋಜನ?' 'ಬಿಡು ಅಮ್ಮಾ, ಅವಳು ಕಲೀಬೇಕೂಂದ್ರೆ ಕಲೀಲಿ. ನಿಂಗೆ ಗೊತ್ತಿಲ್ವಾ, ಜಂಕಾರ್ ಪಾಟ್ನಾಯಕರ ಹೆಣ್ಣುಮಕ್ಕಳು ಭಾಗವತ, 'ವೈದೇಹಿ ವಿಲಾಸ' ಓದ್ತಾರೆ' ಎಂದರು ಶ್ಯಾಮಬಂಧು.

ರೇವತಿಗೆ ಅಜ್ಜಿಯ ಮೇಲೆ ವಿಪರೀತ ಸಿಟ್ಟು ಬಂತು. 'ಬುದ್ಧಿಯಿಲ್ಲದ ಅಜ್ಜಿ' ಎಂದು ಬುಸುಗುಟ್ಟಿದವಳು ತನ್ನ ತಂದೆಯತ್ತ ತಿರುಗಿ, 'ಅಪ್ಪಾ, ನಾನು ಕಲೀಲೇಬೇಕು' ಎಂದು ಗೋಗರೆದಳು.

'ಆಗಲಿ. ಕಲಿತೇ ಕಲೀತೀಯ' ಎಂದರು ಶ್ಯಾಮಬಂಧು.

ಅಲ್ಲಿಗೆ ಆ ವಿಷಯ ಮುಗಿಯಿತು.

ಮಾರನೆಯ ದಿನ ಮಧ್ಯಾಹ್ನ ವಾಸು ರೇವತಿಗೆ ಸೀತಾಕಾಂತ ಬಾಬು ಅವರ 'ಮೊದಲ ಪಾಠಗಳು' ಪುಸ್ತಕವನ್ನು ತಂದುಕೊಟ್ಟ. ಅದನ್ನು ನೋಡಿ ಅವಳಿಗೆಷ್ಟು ಸಂತೋಷವಾಯಿತೆಂದರೆ ಮೊದಲ ಪುಟದಿಂದ ಕಡೆಯ ಪುಟದವರೆಗೆ ತಿರುಗಿಸಿ ತಿರುಗಿಸಿ ನೋಡಿದಳು. ಆನೆಗಳ, ಮನೆಗಳ, ಹಸುಗಳ ಚಿತ್ರಗಳನ್ನು ನೋಡಿ ನೋಡಿ ಅವಳಿಗೆ ರೋಮಾಂಚನವಾಯಿತು. ರಾಜರಿಗೆ ಆನೆಗಳನ್ನು ಕುದುರೆಗಳನ್ನು ಇಟ್ಟುಕೊಳ್ಳುವುದರಲ್ಲೇ ಸಂತೋಷವಿದ್ದೀತು; ಇತರರಿಗೆ ಅವುಗಳ ಮೇಲೆ ಸವಾರಿ ಮಾಡುವುದರಿಂದ ಖುಷಿಯಾಗಬಹುದು. ಆದರೆ, ರೇವತಿಗೆ ಅವುಗಳನ್ನು ನೋಡುವುದರಲ್ಲೇ ಏನೋ